ದಿನಾಂಕ ಃ **06-11-2019** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ಶ್ರೀ ಎಮ್. ವಾಯ್. ಎಸ್ ವಾದಿ ಪರ ವಕೀಲರಿಂದಃ</u>

ನನ್ನ ತಂದೆಗೆ 4 ಜನ ಮಕ್ಕಳು . ನನ್ನ ತಂದೆ 1980 ರಲ್ಲಿ ತೀರಿಕೊಂಡರು. ನಾನು ಬಿ.ಎ ತನಕ ಓದಿರುತ್ತೇನೆ. ನನ್ನ ತಂದೆ ಜೀವಂತ ಇದ್ದಾಗ ಆಸ್ತಿಗಳು ಡೈರಿಗೆ ಹೆಸರು ಹಚ್ಚಿದ್ದರು ಎಂದರೆ ಇಲ್ಲ. ದಾವಾ ಆಸ್ತಿಗಳು ಎಲ್ಲಾ ನಮ್ಮ ತಂದೆ ಹಾಗೂ ಹಿರಿಯರ ಆಸ್ತಿ ಎಂದರೆ ಇಲ್ಲ. ನನ್ನ,ವಾದಿ ಹಾಗೂ ನಮ್ಮ ಅಣ್ಣ-ತಮ್ಮಂದಿರ ನಡುವೆ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಕಾರ 1982 ರಲ್ಲಿ ವಿಭಾಗ ಆಗಿದೆ. ಆ ವಿಭಾಗ ಪತ್ರ ನೊಂದಣಿ ಆಗಿಲ್ಲ . ಆದರೆ ತಲಾಟಿ ಇವರಿಗೆ 1982 ರಲ್ಲಿ ವರದಿಗಾಗಿ ಕೊಟ್ಟಿರುತ್ತೇವೆ. 1985 ರಲ್ಲಿ ಆ ಪ್ರಕಾರ ಡೈರಿ ಆಗಿದೆ. 1982 ರಲ್ಲಿ ವಿಭಾಗ ಆಗಿದೆ ಹಾಗೂ 1985 ರಲ್ಲಿ ಡೈರಿ ಆಗಿದೆ ಅಂತಾ ಹೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಮ್ಮ ಅಣ್ಣ ತಮ್ಮಂದಿರಲ್ಲಿ ನಾನೇ ಹೆಚ್ಚಿನ ಶಿಕ್ಷಣ ಕಲಿತಿರುತ್ತೇನೆ ಎಂದರೆ ಹೌದು. ನಾನೇ ಹೆಚ್ಚಿನ ಶಿಕ್ಷಣ ಕಲಿತಿದ್ದರಿಂದ ನಮ್ಮ ತಂದೆ ತೀರಿಕೊಂಡ ನಂತರ ನಾನೇ ಮನೆತನದ ಹಿರೆತನ ಮಾಡುತ್ತಿದ್ದೆ ಎಂದರೆ ಇಲ್ಲ. ರೇಶನ ಕಾರ್ಡ ಆಗಲಿ, ಸೊಸೈಟಿ ಸಾಲಕ್ಕಾಗಲೀ ನನ್ನ ಅಣ್ಣ ತಮ್ಮಂದಿರು ನಾನು ಕೇಳಿದ ಪತ್ರಕ್ಕೆ ಓದದೇ ಸಹಿ ಮಾಡುತ್ತಿದ್ದರು ಎಂದರೆ ಸಾಕ್ಷಿ ಅವರು ಓದಿಯೇ ಸಹಿ ಮಾಡುತ್ತಿದ್ದರು ಎಂದು ಹೇಳುತ್ತಾರೆ.

2) ತಕರಾರು ಮತ್ತು ಸಾಕ್ಷಿ ವಿಚಾರಣೆ ಸಲ್ಲಿಸಲು ಮಾಹಿತಿ ನಾನೇ ಕೊಟ್ಟಿರುತ್ತೇನೆ. 1982 ರಲ್ಲಿ ನಾವು ವರದಿ ಕೊಟ್ಟಿರುತ್ತೇವೆ ಈ ವಿಚಾರ ನಿಜ ಇರುತ್ತದೆ. ನಾನು 1988 ರಲ್ಲಿ ಯಾವುದೇ ವರದಿ ಕೊಟ್ಟಿಲ್ಲ ಎಂದರೆ ಹೌದು. ವಾಟ್ನಿ ಆಯಿತು ಅಂತಾ ನಾನು ಹೇಳುವ ಪ್ರಕಾರ ವಾದಿಗೆ ನನ್ನ ಪ್ರಕಾರ 12 ಎಕರೆ ಬಂದಿರುತ್ತದೆ. 1 ನೇ ಪ್ರತಿವಾದಿಗೆ 13 ½ ಎಕರೆ ಬಂದಿರುತ್ತದೆ.

ನನಗೆ 17 ಎಕರೆ ಬಂದಿರುತ್ತದೆ. ನನ್ನ ಪ್ರಕಾರ ಎಲ್ಲರಿಗಿಂದ ನನಗೆ ಹೆಚ್ಚಿಗೆ ಜಮೀನ ಬಂದಿದೆ ಎಂದರೆ ಹೌದು. 1991 ರಲ್ಲಿ ನೇಸರಗಿಯಲ್ಲಿ ಇರುವ ಪ್ಲಾಟ ನನ್ನ ಹೆಸರಿನಲ್ಲಿ ನಾನು ಖರೀದಿ ಮಾಡಿರುತ್ತೇನೆ. ಈಗ ನೇಸರಗಿಯಲ್ಲಿ ಇರುವ ಪ್ಲಾಟ ನನ್ನ ಮಕ್ಕಳ ಹೆಸರಿನಲ್ಲಿ ಇದೆ. ಈಗ ಯಾವ ಸಾಲಿನಲ್ಲಿ ಪ್ಲಾಟ ನನ್ನ ಮಕ್ಕಳ ಹೆಸರಿಗೆ ಮಾಡಿರುತ್ತೇನೆ ನೆನಪಿಲ್ಲ. ನಿಡಿ–67 ರ ಪ್ರಕಾರ ದಿಃ 28–08–1985 ರಲ್ಲಿ ನಾನು ಖರೀದಿ ಮಾಡಿರುತ್ತೇನೆ ಎಂದರೆ ಹೌದು. ನಿಡಿ–71 ರ ಪ್ರಕಾರ ನಾನು ದಿಃ 12–04–2013 ರಂದು ನಾನು ನನ್ನ ಮಕ್ಕಳಿಗೆ ಆ ಪ್ಲಾಟ ಬಿಟ್ಟು ಕೊಟ್ಟಿರುತ್ತೇನೆ ಎಂದರೆ ಹೌದು. ದಾವೆ ಆಸ್ತಿಯಲ್ಲಿ ವಾದಿಗೆ ಹಿಸ್ಸೆ ಬರುತ್ತದೆ ಎಂಬ ಕಾರಣದಿಂದ ತರಾತುರಿಯಾಗಿ ನಿಡಿ–71 ನಾನು ತಯಾರು ಮಾಡಿರುತ್ತೇನೆ ಎಂದರೆ ಸುಳ್ಳು. ನಿಡಿ–66 ರ ಪ್ರಕಾರ 1985 ರಲ್ಲಿ ರುದ್ರವ್ವ ಗದಿಗಯ್ಯ ಪೂಜರ ಇವರಿಂದ ದಿಃ 03–09–1986 ರಂದು ಖರೀದಿ ಮಾಡಿರುತ್ತೇನೆ ಎಂದರೆ ಹೌದು. ಎಲ್ಲಾ ಖರೀದಿ ಮಾಡಿರುವ ಪ್ಲಾಟಗಳು ಎಕತ್ರ ಕುಟುಂಬದ ಆದಾಯದಿಂದ ಖರೀದಿ ಮಾಡಿರುವ ಪ್ಲಾಟ ಎಂದರೆ ಇಲ್ಲ. ನಮಗೆ ಸ್ವಂತ ಉತ್ಪನ್ನ ಇತ್ತು ಹಾಗೂ ಆ ಉತ್ಪನ್ನದಿಂದ ಖರೀದಿ ಮಾಡಿರುತ್ತೇವೆ ಅಂತಾ ಹೇಳುವ ಬಗ್ಗೆ ದಾಖಲಾತಿ ಹಾಜರು ಪಡಿಸಿಲ್ಲ. 5 ನೇ ಪ್ರತಿವಾದಿ ತಾಯಿಯ ಹೆಸರು ಕಲ್ಲಮ್ಮ. ಕಲ್ಲಮ್ಮ ಇವರ ತಾಯಿ ಹೆಸರು ಕಾಶವ್ವ. 5 ನೇ ಪ್ರತಿವಾದಿಯ ತಾಯಿ ಕಲ್ಲವ್ವ ಇದ್ದಾರೆ. ಕಾಶವ್ವ ಕೂಡ ಇದ್ದಾರೆ. 5 ನೇ ಪ್ರತಿವಾದಿ ಯಾವಾಗ ನೌಕರಿಗೆ ಸೇರಿದ ಗೊತ್ತಿಲ್ಲ. ನೌಕರಿ ಹಣದಿಂದ ಖರೀದಿ ಮಾಡಿರುತ್ತಾನೆ. ಬಸಲಿಂಗವ್ವ ಮಲ್ಲಮ್ಮನವರ ಇವರ ಕಡೆಯಿಂದ 5 ನೇ ಪ್ರತಿವಾದಿ ಪ್ಲಾಟ ಖರೀದಿ ಮಾಡುವಾಗ ನೌಕರಿಗೆ ಇನ್ನೂ ಸೇರಿರಲಿಲ್ಲ. ನೌಕರಿ ಹಣದಿಂದ ಖರೀದಿ ಮಾಡಿದ ವಿಚಾರ ನಿಜ. ಖರೀದಿ ಕಾಲಕ್ಕೆ ಎಷ್ಟು ವರ್ಷ ನೌಕರಿ ಮಾಡಿದ್ದಾನೆ ನನಗೆ ನೆನಪಿಲ್ಲ. ನೌಕರಿಗೆ ಯಾವ ವಯಸ್ಸಿನಲ್ಲಿ ಹೋಗಿದ್ದ ನೆನಪಿಲ್ಲ. ನನ್ನ ಹಾಗೂ ನನ್ನ ಅಣ್ಣ ತಮ್ಮಂದಿರ ನಡುವೆ ದಾವಾ ಆಸ್ತಿಗಳಲ್ಲಿ ವಾಟ್ನಿ ಆಗಿಲ್ಲ ಎಂದರೆ ಸರಿಯಲ್ಲ. ನೇಸರಗಿ, ಪೂಜಾರ

ಇವರ ಕಡೆಯಿಂದ ಖರೀದಿ ಮಾಡಿದ ಪ್ಲಾಟಗಳು ನಮ್ಮ ಏಕತ್ರ ಕುಟುಂಬದ ಬಂದ ಆದಾಯ ಹಣದಿಂದ ಎಂದರೆ ಸರಿಯಲ್ಲ. ನಾನು ಮನೆತನದ ಹಿರೆತನ ಮಾಡುತ್ತಿದ್ದೆ ಆದ್ದರಿಂದ ನನ್ನ ಅಣ್ಣ ತಮ್ಮಂದಿರ ಸಹಿಯನ್ನು ಕಾಗದದ ಮೇಲೆ ಪಡೆದು ಸುಳ್ಳು ವರದಿ ನೀಡಿ ವರದಿ ಸುಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಿದೆ

(ಚೈತ್ರಾ ಎ. ಎಮ್.)
ಪ್ರ ದ ನ್ಯಾ ದಂ, ಬೈಲಹೊಂಗಲ